# ಪರಕಾಯ ಪ್ರವೇಶಕ್ಕೆ ಭಾವುಕತೆಯೇ ದಾರಿ



**ಈಚೆಗೆ** ತೆರೆಕಂಡ 'ಮರ್ಫಿ' ಚಿತ್ರದಲ್ಲಿ ಅಭಿನಯಿಸಿದ್ದ ರೋಶಿನಿ ಪ್ರಕಾಶ್, ಸಿನಿಮಾ ಬಿಡುಗಡೆ ದಿನ ಸಿನಿಮಾ ಮಂದಿರಕ್ಕೆ ಭೇಟಿ ನೀಡಿದ್ದ ಸಂದರ್ಭ ನಡೆದ ಸಂಗತಿಯೊಂದನ್ನು ನೆನಪಿಸಿಕೊಂಡಿದ್ದಾರೆ. ಆ ಸಂಗತಿ ತಮ್ಮಲ್ಲಿ ಹೇಗೆ ಪ್ರೇರಣೆ ತುಂಬಿತು ಎಂಬುದನ್ನೂ ಹೇಳಿಕೊಂಡಿದ್ದಾರೆ.

''ಸಿನಿಮಾ ತೆರೆಕಾಣುವಾಗ ಸಿನಿಮಾ ಹಾಲ್ ತುಂಬಾ ನಿಶ್ಯಬ್ದವಾಗಿತ್ತು. ಆ ನಿಶ್ಯಬ್ದತೆ ಕಲಾವಿದರಾದ ನಮ್ಮಲ್ಲಿ ಸಹಜವಾಗಿಯೇ ಗೊಂದಲ ಹುಟ್ಟುಹಾಕಿತ್ತು. ಜನರಿಗೆ ಸಿನಿಮಾ ಇಷ್ಟವಾಯಿತೊ ಇಲ್ಲವೋ ಎಂಬುದೊಂದು ಸಂಶಯ ಇದ್ದೇ ಇತ್ತು. ಆದರೆ ಸಿನಿಮಾ ಮುಗಿದಾಗ ಆ ನಿಶ್ಯಬ್ದತೆಯ ಅರ್ಥ ತಿಳಿಯಿತು. ಆ ಕಥೆಯಿಂದ ಪ್ರೇಕ್ಷಕರು ಭಾವುಕವಾಗಿದ್ದರು. ಅದರಲ್ಲೂ ಹಿರಿಯರೊಬ್ಬರು ನನ್ನ ಬಳಿ ಬಂದು, ನನ್ನನ್ನು ಆ ಪಾತ್ರದ ಹೆಸರಿನಲ್ಲೇ ಕರೆದು, 'ನಿನ್ನನ್ನು ಹತ್ತಿರದಿಂದ ನೋಡಬೇಕು ಎನಿಸಿತು' ಎಂದಷ್ಟೆ ಹೇಳಿ, ಅವರ ಪಾಡಿಗೆ ಅವರು ಹೊರಟುಹೋದರು. ಈ ಸಂಗತಿ ನನ್ನನ್ನು ಮೌನವಾಗಿಸಿತು''.

ಹೀಗೆ ಪ್ರೇಕ್ಷಕರನ್ನು ತಮ್ಮ ನಟನೆಯಿಂದ ಗೆಲ್ಲುವುದು ಅದೆಷ್ಟು ಸುಂದರ ಅನುಭವವಲ್ಲವೇ ಎಂದು ಕೇಳುವ ರೋಶಿನಿ, ಸಿನಿಮಾರಂಗಕ್ಕೆ ಬರುವ ಮುನ್ನ ತಮ್ಮ ಮುಂದಿದ್ದ ಮತ್ತೊಂದು ದಾರಿಯನ್ನು ಆಯ್ಕೆ ಮಾಡಿಕೊಳ್ಳದಿರುವ ಕುರಿತು ಸಂತಸವನ್ನೂ ವ್ಯಕ್ತಪಡಿಸಿದ್ದಾರೆ.

'ನಾನು ತುಂಬಾ ಚೆನ್ನಾಗಿ ಓದುತ್ತಿದ್ದೆ. ಆಸ್ಟ್ರೇಲಿಯಾದ ವಿಶ್ವವಿದ್ಯಾಲಯದಲ್ಲಿ ಮಾಸ್ಟರ್ ಮಾಡುವ ಅವಕಾಶವೂ ಬಂದಿತ್ತು. ಆದರೆ ನನ್ನ ಸೆಳೆತ ಸಿನಿಮಾಗಳತ್ತ ಇತ್ತು. ಹೀಗಾಗಿ ಅದನ್ನು ಬಿಟ್ಟೆ. ನನ್ನ ಪೋಷಕರೂ ಬೆಂಬಲವಾದರು' ಎಂದು ಆರಂಭದ ದಿನಗಳನ್ನು ನೆನಪಿಸಿಕೊಂಡಿದ್ದಾರೆ.

'ನನ್ನನ್ನು ಮೊದಲ ಬಾರಿ ನಿರ್ದೇಶಕರು ನೋಡಿ, ಸಿನಿಮಾ ಆಫರ್ ಮುಂದಿಟ್ಟಾಗ ನನಗಿನ್ನೂ 14 ವರ್ಷ. ಶ್ರೀರಂಗಪಟ್ಟಣದ ನಿಮಿಷಾಂಬ ದೇಗುಲದಲ್ಲಿ ನನ್ನ ಸ್ನೇಹಿತರ ಜೊತೆಗಿದ್ದೆ. ಆಗ ನಾನು ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ನನ್ನ ಮನೆಯಲ್ಲೂ ಏನೂ ಹೇಳಲು ಹೋಗಲಿಲ್ಲ. ಆದರೆ ಎಂಜಿನಿಯರಿಂಗ್ ಮೂರನೇ ವರ್ಷದಲ್ಲಿದ್ದಾಗ ಹಲವು ಸಿನಿಮಾ ಆಫರ್‌ಗಳು ಬಂದವು, ನಾನು ಈ ಮಾರ್ಗದಲ್ಲೇ ಹೋಗಬೇಕೆಂಬುದು ವಿಧಿಲಿಖಿತ ಎಂದುಕೊಂಡೇ ಮುಂದುವರೆದೆ' ಎಂದಿದ್ದಾರೆ.

'ಇದುವರೆಗೂ ಕನ್ನಡ, ತಮಿಳು ಹಾಗೂ ತೆಲುಗು ಭಾಷೆಗಳಲ್ಲಿ 14 ಸಿನಿಮಾಗಳನ್ನು ಮಾಡಿದ್ದೇನೆ. ಮಾಸ್ ಸಿನಿಮಾಗಳು ಎಕ್ಸ್‌ಪೋಷರ್ ಕೊಟ್ಟವು. ಐಡೆಂಟಿಟಿ ಹಾಗೂ ಅವಕಾಶಗಳನ್ನೂ ಕೊಟ್ಟವು. ಕಂಟೆಂಟ್ ಸಿನಿಮಾಗಳು ಸೃಜನಶೀಲತೆಯ ಮಹತ್ವದೊಂದಿಗೆ ಕಲಾಭಿವ್ಯಕ್ತಿಯ ಸಂತೋಷವನ್ನೂ ನೀಡಿದವು. ಹೀಗಾಗಿ ನಾನು ಕಂಟೆಂಟ್ ಹಾಗೂ ಕಮರ್ಷಿಯಲ್ ಎರಡರ ನಡುವೆಯೂ ಸಮತೋಲನ ಕಾಯ್ದುಕೊಳ್ಳುತ್ತೇನೆ. ನಾನು ಭಾವಜೀವಿ. ಹೀಗಾಗಿಯೇ ಆ ಸೂಕ್ಷ್ಮತೆ ನನ್ನನ್ನು ಪ್ರತಿ ಪಾತ್ರದೊಳಗೂ ಇಳಿಯುವಂತೆ ಮಾಡುತ್ತದೆ' ಎಂದು ತಮ್ಮ ಆದ್ಯತೆ, ಪ್ರೇರಣೆಗಳ ಬಗ್ಗೆಯೂ ಮಾತನಾಡಿದ್ದಾರೆ. ■



## ಹುರುಪು ಪಡೆದ 'ಕಾಂತಾರ' ಪ್ರೀಕ್ವೆಲ್

ನಟ ರಿಷಬ್ ಶೆಟ್ಟಿ 'ಜೈ ಹನುಮಾನ್' ಚಿತ್ರದಲ್ಲಿ ಹನುಮನ ಪಾತ್ರಧಾರಿಯಾಗಿ ಟಾಲಿವುಡ್‌ಗೆ ಹೆಜ್ಜೆ ಇಟ್ಟಿದ್ದಾರೆ. ಈ ಸಿನಿಮಾದಲ್ಲಿ ತಮ್ಮ ಪಾತ್ರಕ್ಕಾಗಿ ಸಾಕಷ್ಟು ಸಿದ್ಧತೆ ನಡೆಸುತ್ತಿರುವ ರಿಷಬ್, 'ಕಾಂತಾರ' ಪ್ರೀಕ್ವೆಲ್‌ನ ಚಿತ್ರೀಕರಣವನ್ನೂ ಪುನರಾರಂಭಿಸಿದ್ದಾರೆ.

ಈಚೆಗೆ 'ಜೈ ಹನುಮಾನ್' ಸಿನಿಮಾ ಪೋಸ್ಟರ್ ಬಿಡುಗಡೆ ಮಾಡಿದ್ದು, ಈ ಸುದ್ದಿಯೊಂದಿಗೆ 'ಕಾಂತಾರ' ಪ್ರೀಕ್ವೆಲ್ ಸಿನಿಮಾ ಬಗ್ಗೆಯೂ ಪ್ರೇಕ್ಷಕರಲ್ಲಿ ಕುತೂಹಲ ಉಂಟಾಗಿದೆ. ಸಿನಿಮಾ ಯಾವಾಗ ತೆರೆಕಾಣಬಹುದು ಎಂಬ ಪ್ರಶ್ನೆಯೂ ಹುಟ್ಟಿಕೊಂಡಿದೆ.

ಸಿನಿಮಾ ಚಿತ್ರೀಕರಣದ ಮೂರನೇ ಹಂತ ಈಗ ಆರಂಭಗೊಂಡಿದ್ದು, ಇನ್ನು 60 ದಿನಗಳಲ್ಲಿ ಚಿತ್ರೀಕರಣ ಮುಕ್ತಾಯವಾಗಲಿರುವುದಾಗಿ ಮೂಲಗಳು ತಿಳಿಸಿವೆ. ಇದಕ್ಕಾಗಿ ರಿಷಬ್ ಕೂಡ ವರ್ಷದಿಂದ ಕುದುರೆ ಸವಾರಿ, ಸಮರ ಕಲೆ ಕಳರಿಪಯಟ್ಟು ಅಭ್ಯಾಸದಲ್ಲಿ ನಿರತರಾಗಿದ್ದಾರೆ. 2025ರಲ್ಲಿ 'ಕಾಂತಾರ' ಚಾಪ್ಟರ್ 2 ತೆರೆಕಾಣುವ ನಿರೀಕ್ಷೆಯಿದೆ.

ಕದಂಬರ ಆಳ್ವಿಕೆಯ ಕಾಲದಲ್ಲಿ ಹುಟ್ಟಿದ ದಂತಕಥೆಯ ಕಥಾಹಂದರ ಇದಾಗಿದ್ದು, ಕನ್ನಡ, ಇಂಗ್ಲಿಷ್ ಸೇರಿದಂತೆ ಏಳು ಭಾಷೆಗಳಲ್ಲಿ ಏಕಕಾಲದಲ್ಲಿ ಈ ಸಿನಿಮಾ ಬಿಡುಗಡೆಯಾಗಲಿದೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಅರವಿಂದ್ ಎಸ್. ಕಶ್ಯಪ್ ಛಾಯಾಚಿತ್ರಗ್ರಹಣ ಸೇರಿದಂತೆ ಮೊದಲ ಭಾಗದಲ್ಲಿ ಕಾರ್ಯನಿರ್ವಹಿಸಿದ್ದ ತಾಂತ್ರಿಕ ತಂಡವೇ ಪ್ರೀಕ್ವೆಲ್‌ನಲ್ಲೂ ಕೆಲಸ ಮಾಡುತ್ತಿದೆ. ■